ಜಾಗತಿಕ ಮಟ್ಟದಲ್ಲಿ ತೆಗೆದುಕೊಂಡಿದ್ದಾರೆ ಹಾಗೆಯೇ ಇದಕ್ಕಾಗಿ ಈ ಕಾರ್ಯಕ್ರಮವನ್ನು ರೂಪಿಸಿದ್ದಾರೆ, ಆದುದರಿಂದ ಅದನ್ನು ಪ್ರಾರಂಭಿಸಲು ತಾವು ಕ್ರಮ ಕೈಗೊಳ್ಳುತ್ತೀರಾ ಎಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಉತ್ತರವನ್ನು ನೀಡಿದ್ದೇನೆ. ಬೇರೆ ಇಲಾಖೆಗಳಲ್ಲೂ ಈ ಬಗ್ಗೆ ಪ್ರಯತ್ನಪಡಬೇಕೆಂದು ಹೇಳುತ್ತೇನೆ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ರೈತರು ನೀರಾಗಲೀ ಮಣ್ಣಾಗಲೀ, ಯಾವುದೇ ಆಗಲೀ ಅಥವಾ ಯಾವುದೇ ವ್ಯವಸಾಯಕ್ಕೆ ಬಳಸಿಕೊಳ್ಳುವಂಥದ್ದಾಗಲೀ ಅದನ್ನು ಸಮರ್ಪಕವಾಗಿ ವೈಜ್ಞಾನಿಕವಾಗಿ ಅವರು ಬಳಕೆ ಮಾಡಿಕೊಳ್ಳಬೇಕು. ಅದರ ದುರ್ಬಳಕೆ ಆದಾಗ ಈ ರೀತಿ ಆಗುತ್ತದೆ. ನೀರಿನ ದುರ್ಬಳಕೆ ನಮ್ಮ ರಾಜ್ಯದಲ್ಲಿ ಯಥೇಚ್ಛವಾಗಿ ನಡೆಯುತ್ತಾ ಇದೆ, ಗೊಬ್ಬರದ ದುರ್ಬಳಕೆಯೂ ಕೂಡ ಯಥೇಚ್ಛವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇದೆ. ಆದರೆ ಇಲಾಖೆ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ, ಇದನ್ನು ಇಲಾಖೆಯಿಂದ ಸರಿಪಡಿಸತಕ್ಕಂಥ, ರೈತರಿಗೆ ತಿಳುವಳಿಕೆ ಕೊಡತಕ್ಕಂಥ ಕೆಲಸವನ್ನೂ ಸಹ ಮಾಡುತ್ತಿದೆ, ಪ್ರಯತ್ನವನ್ನೂ ನಡೆಸುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ವಿಚಿತ್ರವಾಗಿ ಕಾಣುತ್ತಿದೆ. ರೈತರೆಲ್ಲರೂ ಬೈರೇಗೌಡರ ರೀತಿ ರೈತರಿಲ್ಲ. ಹೆಬ್ಬೆಟ್ಟಿನ ರೈತರಿದ್ದಾರೆ, ಓದುಬರಹ ತಿಳಿಯದೇ ಇರತಕ್ಕಂಥ ರೈತರಿದ್ದಾರೆ. ಆ ರೈತರ ಭೂಮಿಗೆ ಹೊಸದಾಗಿ ನೀರು ಬಂದಾಗ ಹೇಗೆ ಕೃಷಿ ಮಾಡಬೇಕು ಎಂಬ ತಿಳುವಳಿಕೆ ಇಲ್ಲ. ಆ ತಿಳುವಳಿಕೆಯನ್ನು ಕೊಟ್ಟರೆ ತಾನೆ ಹೇಗೆ ಉಪಯೋಗ ಮಾಡಿಕೊಳ್ಳಬೇಕೆನ್ನುವುದು ಗೊತ್ತಾಗುವುದು. ಆ ಕೆಲಸವನ್ನು ಇಲಾಖೆಯಿಂದ ಮಾಡಿಸುವುದು ಬಿಟ್ಟು ಅವರು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ, ಇದನ್ನು ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ, ಮತ್ತೊಂದು ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ ಎಂದು ನೀವು ಸುಮ್ಮನೆ ರೈತರಿಗೆ ಆಕಾಶ ತೋರಿಸಿದರೆ ಹೇಗೆ?

ಶ್ರೀ ಸಿ.ಬೈರೇಗೌಡ : ಇಲಾಖೆ ಇರತಕ್ಕಂಥದ್ದೇ ರೈತರಿಗೆ ಸಕಾಲಿಕವಾದಂಥ ಮಾಹಿತಿಯನ್ನು ಕೊಡುವುದಕ್ಕೆ.

ಆಳಂದ್‌ನಲ್ಲಿ ಕೃಷಿ ಮಾರುಕಟ್ಟೆ ಸಮಿತಿ ಕಟ್ಟಡಗಳನ್ನು ಉಪಯೋಗಿಸುವ ಬಗ್ಗೆ.

169 - ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಪಟ್ಟಣದಲ್ಲಿ ಕೃಷಿ ಮಾರುಕಟ್ಟೆ ಕಟ್ಟಡಗಳು ಕಟ್ಟಿಸಿ 2 ವರ್ಷಗಳಾದರೂ ಉಪಯೋಗಿಸದಿರಲು ಕಾರಣಗಳೇನು?

ಆ) ಕೃಷಿ ಮಾರುಕಟ್ಟೆಯಲ್ಲಿ ವ್ಯವಹಾರ ಪ್ರಾರಂಭಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯಸಚಿವರು) :

ಅ) ಕಛೇರಿ ಕಟ್ಟಡವನ್ನು ಉಪಯೋಗಿಸಲಾಗುತ್ತಿದೆ. ಉಳಿದ ಕಟ್ಟಡಗಳನ್ನು ಉಪಯೋಗಿಳಲು ಕ್ರಮಕೈಗೊಳ್ಳಲಾಗುತ್ತಿದೆ.

ಹೌದು.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಮಾನ್ಯ ಅಧ್ಯಕ್ಷರೆ, ಆಳಂದ ಪಟ್ಟಣದಲ್ಲಿ ಕೃಷಿ ಮಾರುಕಟ್ಟೆ ಅಂಗಡಿಗಳನ್ನು ಕಟ್ಟಿಸಿ ಎರಡು ವರ್ಷವಾದವು, ಅವುಗಳನ್ನು ಇನ್ನೂ ಯಾರಿಗೂ ಕೊಡದೆ ಹಾಗೆ ಇಟ್ಟುಕೊಂಡಿದ್ದಾರೆ. ಅದಕ್ಕೆ ವಿದ್ಯುಚ್ಛಕ್ತಿ ಸೌಕರ್ಯವನ್ನು ತೆಗೆದುಕೊಂಡು ಕೃಷಿ ಅಂಗಡಿಗಳನ್ನು ಕೊಡಬೇಕು ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್. ನಾಗಪ್ಪ : ಅದು ಬಹಳ ಚಿಕ್ಕ ಮಾರ್ಕೆಟ್, ಅಲ್ಲಿ ವಹಿವಾಟು ಅಷ್ಟು ಚೆನ್ನಾಗಿ ನಡೆಯುತ್ತಾ ಇಲ್ಲ. ಕಟ್ಟಡವೂ ಕೂಡ ಸ್ವಲ್ಪ ಕೆಟ್ಟುಹೋಗಿದೆ. ನಾವೇನು ರೈತಭವನವನ್ನು ಕಟ್ಟಿದ್ದೇವೋ ಅದು ಸ್ವಲ್ಪ ಬಿರುಕು ಬಿಟ್ಟುಬಿಟ್ಟಿದೆ. ಮತ್ತೆ ಅಡಳಿತವನ್ನು ಅಲ್ಲೇ ನಡೆಸುತ್ತಿದ್ದೇವೆ. ಅಲ್ಲಿ ಬೇರೆ ಯಾರು ವ್ಯಾಪಾರಗಾರರು ಬರದೇ ಇರುವುದರಿಂದ ಸ್ವಲ್ಪ ಲೇಟಾಗುತ್ತಿದೆ, ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಸುಭಾಷ್ ಆರ್. ಗುತ್ತೇದಾರ್ : ಅಧ್ಯಕ್ಷರೆ, ಎರಡು ವರ್ಷಗಳಾದರೂ ವಿದ್ಯುಚ್ಛಕ್ತಿ ಸೌಕರ್ಯವನ್ನು ಕೊಟ್ಟಿಲ್ಲ.

ಶ್ರೀ ಹೆಚ್. ನಾಗಪ್ಪ : ಅದನ್ನೆಲ್ಲ ಕೊಡಿಸಿಕೊಡುತ್ತೇವೆ, ತಾವು ಯಾರನ್ನಾದರೂ ಕಳುಹಿಸಿಕೊಡುವುದಾದರೆ ಅದನ್ನು ಬಹಳ ಜಾಗ್ರತೆಯಾಗಿ ಮಾಡಿಸಿಕೊಡುತ್ತೇನೆ.

ಅಧ್ಯಕ್ಷರು : ಮಾನ್ಯ ಮಂಜುನಾಥರವರೆ, ಮಾನ್ಯ ಯಡಿಯೂರಪ್ಪನವರ ಪ್ರಶ್ನೆಗೆ ಮಂತ್ರಿಯವರು ಉತ್ತರಿಸುವಾವಕಾಶವನ್ನು ಕೇಳಿದ್ದಾರೆ.

ಶ್ರೀ ಆಯನೂರು ಮಂಜುನಾಥ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಯಾವಾಗ ಉತ್ತರ ಕೊಡುತ್ತಾರೆ?

ಅಧ್ಯಕ್ಷರು : ಅವರು ಕಾಲಾವಕಾಶವನ್ನು ಕೇಳಿದ್ದಾರೆ. ಅವರು ಬಂದಾಗ ನಾನು ಉತ್ತರವನ್ನು ಕೊಡಿಸುತ್ತೇನೆ. ಅದಕ್ಕಿಂತ ಹೆಚ್ಚಿಗೆ ನಾನು ಏನು ಹೇಳಲಿ, ಯಾರನ್ನು ಕೇಳಲಿ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ನಮಗೆ ಬಹಳಷ್ಟು ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ಸರ್ಕಾರದಿಂದ ಉತ್ತರ ನಮಗೆ ಬರದೇ ಇರುವುದು, ನೀವು ನಮಗೆ ಬಹಳ ಉದಾರತೆಯಿಂದ ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ನಮಗೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು : ಈಗ ಅವರ ಪ್ರಶ್ನೆ ಮುಗಿಯಲಿ ಅವರಿಗೆ ಮಂತ್ರಿಗಳು ಇದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇಲ್ಲಿ ಈಗ ಪ್ರಶ್ನೆ ಕೇಳುವವರು ಮತ್ತು ಉತ್ತರ ಕೊಡುವವರು ಇದ್ದಾರೆ. ಅವರು ಎಲ್ಲೂ ಓಡಿ ಹೋಗುವುದಿಲ್ಲ. ಅದರ ಬಗ್ಗೆ ನನಗೆ ವಿಶ್ವಾಸವಿದೆ. ಆದರೆ ಓಡಿ ಹೋಗಿರುವಂತಹ ಮಂತ್ರಿಯವರ ಬಗ್ಗೆ ಏನು ಮಾಡಬೇಕು ಎಂದು ನನಗೆ ಅನುಮಾನವಿದೆ.

ಶ್ರೀ ಕೆ.ಎನ್. ನಾಗೇಗೌಡ : ಆ ರೀತಿಯಲ್ಲ, ಮೇಲ್ಮನೆಯಲ್ಲಿ ಪ್ರಶ್ನೋತ್ತರ, ಇತರೆ ಕಾರ್ಯಕಲಾಪಗಳು ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅದನ್ನು ಹಂಚಿಕೊಳ್ಳಬೇಕು, ಯಾವಾಗ ಉತ್ತರ ಕೊಡುತ್ತಾರೆ, ಮಂತ್ರಿಗಳು ಇಲ್ಲಿ ಇಲ್ಲ, ಯಾರನ್ನು ಕೇಳಬೇಕೆಂದು ಗೊತ್ತಿಲ್ಲ. ಅಧ್ಯಕ್ಷರು ಈ ವಿಷಯವಾಗಿ

ಸೂಚನೆಯನ್ನು ಕೊಟ್ಟಿದ್ದಾರೆ. ಒಂದು ಸಾರಿ ಜಗಳವೂ ಆಗಿದೆ. ಇಷ್ಟೆಲ್ಲಾ ಆದರೂ ಸರ್ಕಾರಕ್ಕೆ ಇನ್ನೂ ಬುದ್ಧಿ ಬಂದಿಲ್ಲವೆಂದರೆ, ಇನ್ನು ಯಾವ ರೀತಿಯಲ್ಲಿ ನಾವು ಪ್ರತಿಭಟನೆಯನ್ನು ಮಾಡಬೇಕು.

ಅಧ್ಯಕ್ಷರು : ನಾನು ಉತ್ತರವನ್ನು ತರಿಸಿಕೊಡುತ್ತೇನೆ. ನಿಮ್ಮ ಭಾವನೆಗಳನ್ನು ಪರಿಣಾಮಕಾರಿಯಾಗಿ ಸರ್ಕಾರಕ್ಕೆ ತಿಳಿಸಿ ಉತ್ತರವನ್ನು ಆದಷ್ಟು ಬೇಗ ತಮಗೆ ತರಿಸಿ ಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ಕೊಡುವ ಉತ್ತರವೇ ಆಗಿದೆ. ಅವರು ಕೊಡುವಂತಹ ಉತ್ತರ ಈಗ ಇಲ್ಲ.

ಅಧ್ಯಕ್ಷರು : ಏನು ಮಾಡುವುದು, ಇದೆಲ್ಲಾ ಜಾತಕದ ಫಲ, ಯಾರ್ಯಾರು ಏನೇನು ಕೇಳಿಕೊಂಡು ಬಂದಿದ್ದಾರೊ, ಅದನ್ನು ಅನುಭವಿಸಬೇಕು.

ಪಾಂಡವಪುರಕ್ಷೇತ್ರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ

174 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಂಡವಪುರ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳು ಎಷ್ಟು; ಇಲ್ಲಿಯವರೆಗೆ ಜೀರ್ಣೋದ್ಧಾರಕ್ಕಾಗಿ ಎಷ್ಟು; ಹಣ ಬಿಡುಗಡೆ ಮಾಡಲಾಗಿದೆ;

ಆ) ಸದರಿ ತಾಲ್ಲೂಕಿನ ಯಾವ ಯಾವ ದೇವಸ್ಥಾನಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :

ಅ) ಪಾಂಡವಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 295 ಮುಜರಾಯಿ ಸಂಸ್ಥೆಗಳಿಗೆ 1990-91 ರಿಂದ ಈವರೆಗೂ ರೂ. 3,10,000-00 ಬಿಡುಗಡೆ ಮಾಡಲಾಗಿದೆ.

ಆ) -ಪಟ್ಟಿ ಲಗತ್ತಿಸಿದೆ-

ಅನುಬಂಧ

ಸಾಲು	ದೇವಾಲಯದ ಹೆಸರು	ಬಿಡುಗಡೆ ಮಾಡಿರುವ ಅನುದಾನ
1990-91	ಶ್ರೀ ಬೋರೆಸ್ವಾಮಿ ದೇವಾಲಯ, ಜಕ್ಕನಹಳ್ಳಿ	10,000-00
1992-93	ಶ್ರೀ ತಿರುನಾರಾಯಣ ಮೇಲುಕೋಟೆ	2,00,000-00
1993-94	ಶ್ರೀ ಕಾಳಮ್ಮ ದೇವಸ್ಥಾನ ಇಂಗಲಗುಡ್ಡೆ	25,000-00
1993-94	ಶ್ರೀ ಬೈರವೇಶ್ವರ ದೇವಸ್ಥಾನ, ಮಾಣಿಕ್ಯದಹಳ್ಳಿ	25,000-00
1993-94	ಶ್ರೀ ಹನುಮಂತರಾಯಸ್ವಾಮಿ ದೇವಸ್ಥಾನ, ಕಾಡೇನಹಳ್ಳಿ	25,000-00
1995-96	ಶ್ರೀಯೋಗನರಸಿಂಹಸ್ವಾಮಿ ದೇವಸ್ಥಾನ ಮೇಲುಕೋಟೆ	25,000-00
		ಬಿಡುಗಡೆಯಾಗಿಲ್ಲ